ದಿನಾಂಕ: 06-03-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು: ಆರೋಪಿ ಪರ ಶ್ರೀ. ಜೆ. ಕೆ. ಆರ್. ವಕೀಲರಿಂದ

12. ನನಗೆ ಎರಡು ಮನೆಗಳು ಇದ್ದು ಅದರಿಂದ ಬಾಡಿಗೆ ಬರುತ್ತದೆ ಎಂದು ಹೇಳಿದ್ದು ನಾನು ಮನೆಗಳನ್ನು ಹೊಂದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಮನೆಗಳಿಂದ ಬಾಡಿಗೆ ಹಣ ಪಡೆದುಕೊಳ್ಳುತ್ತಿದ್ದೇನೆ ಎಂದು ತೋರಿಸುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಬಹುದು. ಆದಾಯ ತೆರಿಗೆ ರಿಟರ್ನ್ಸ್ ದಾಖಲು ಮಾಡುವ ಸಮಯದಲ್ಲಿ ಅದರಲ್ಲಿ ನಾನು ಆರೋಪಿಗೆ ನೀಡಿದ ಹಣದ ಬಗ್ಗೆ ನಮೂದು ಮಾಡಿರುವುದಿಲ್ಲ. ಆ ರೀತಿ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ.

13. ನಾನು ಆರೋಪಿಗೆ ಹಣ ನೀಡುವ ಉದ್ದೇಶದಿಂದ ನನ್ನ ಜಮೀನನ್ನು ಮಾರಾಟ ಮಾಡಿರಲಿಲ್ಲ ಮತ್ತು ಮನೆಯನ್ನು ಭೋಗ್ಯಕ್ಕೆ ನೀಡಿರಲಿಲ್ಲ. ನನ್ನ ಸ್ವಂತಕ್ಕೆ ಹಣ ಅವಶ್ಯಕತೆ ಇದ್ದ ಕಾರಣ ನಾನು ಜಮೀನನ್ನು ಮಾರಾಟ ಮಾಡಿರುತ್ತೇನೆ ಮತ್ತು ಮನೆಯನ್ನು ಭೋಗ್ಯಕ್ಕೆ ನೀಡಿರುತ್ತೇನೆ. ನಾನು ನಾಗಮಂಗಲದಲ್ಲಿ ನಿವೇಶನವನ್ನು ಖರೀದಿ ಮಾಡುವ ಉದ್ದೇಶದಿಂದ ನನ್ನ ಜಮೀನನ್ನು ಮಾರಾಟ ಮಾಡಿದ್ದೆನು.

14. ಆರೋಪಿ ಎ-1 ಗುತ್ತಿಗೆದಾರರು ಆಗಿರುತ್ತಾರೆ ಅದರಿಂದ ಅವರಿಗೆ ಸಾಕಷ್ಟು ಆದಾಯ ಇರುತ್ತದೆ. ಸದರಿ ಗುತ್ತಿಗೆ ಕೆಲಸದಿಂದ ಆರೋಪಿಗೆ ಎಷ್ಟು ಆದಾಯ ಇತ್ತು ಎಂದು ನನಗೆ ನಿಖರವಾಗಿ ಮಾಹಿತಿ ಇರುವುದಿಲ್ಲ. ಗುತ್ತಿಗೆ ಕೆಲಸವನ್ನು ಹೊರತು ಪಡಿಸಿ ಆರೋಪಿಯು ನಾಗಮಂಗಲದಲ್ಲಿ ತಾಜ್ ಎಲೆಕ್ಟ್ರಿಕಲ್ಸ್ ಎಂಬ ಅಂಗಡಿಯನ್ನು ನಡೆಸುತ್ತಿದ್ದು ಅದರಿಂದ ಸಹ ಅವರಿಗೆ ಆದಾಯ ಇರುತ್ತದೆ.

15. ನಾನು ಆರೋಪಿಗೆ 7 ಲಕ್ಷ ರೂಪಾಯಿಗಳನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ನಾನು ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದೆನು. ಆರೋಪಿಗೆ 7 ಲಕ್ಷ ರೂಪಾಯಿಗಳನ್ನು ನೀಡುವಷ್ಟು ಸಾಮರ್ಥ್ಯ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನಿಂದ 7 ಲಕ್ಷ ರೂಪಾಯಿಗಳನ್ನು ಪಡೆದುಕೊಳ್ಳುವ ಅವಶ್ಯಕತೆ ಆರೋಪಿಗೂ ಸಹ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.